ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಮನೆ ಹಾಗೂ ವರ್ಕಶೆಡ್ ಸೌಲಭ್ಯ

388(360) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ ಕ್ಷೇತ್ರ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಮನೆಗಳನ್ನು ಹಾಗೂ ವರ್ಕ್ ಶೆಡ್‌ಗಳನ್ನು ಕಟ್ಟಿಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು)

ಅ. ಕೇಂದ್ರ ಪುರಸ್ಕೃತ ವಸತಿ-ಎ- ಕಾರ್ಯಗಾರ ಯೋಜನೆಯಡಿಯಲ್ಲಿ ಸಹಕಾರಿ ವಲಯ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯ ನಿರ್ವಹಿಸುತ್ತಿರುವ ನೇಕಾರರಿಗೆ ವಸತಿ ಕಾರ್ಯಾಗಾರಗಳನ್ನು ಮತ್ತು ಮನೆಗೆ ಹೊಂದಿಕೊಂಡಂತೆ ಕಾರ್ಯಾಗಾರಗಳನ್ನು ನಿರ್ಮಿಸಿಕೊಡುವ ಯೋಜನೆ ಇರುತ್ತದೆ.

ವಕ್ಕುಂದ ಗ್ರಾಮದಲ್ಲಿನ ಯಾವುದೇ ನೇಕಾರರು ವಸತಿ ಕಾರ್ಯಾಗಾರಗಳನ್ನಾಗಲಿ ಅಥವಾ ಕಾರ್ಯಾಗಾರಗಳನ್ನಾಗಲಿ ನಿರ್ಮಿಸಿಕೊಡಲು ವಿನಂತಿಸಿ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.

ರಾಜ್ಯದಲ್ಲಿ ಮುಚ್ಚುತ್ತಿರುವ ಸಣ್ಣ ಕೈಗಾರಿಕೆಗಳನ್ನು ಪುನರುಜ್ಜೀವನ ಗೊಳಿಸುವುದು

389(362) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ. ಆ ಸಣ್ಣ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಮುಚ್ಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; (ಮುಚ್ಚುತ್ತಿರುವ ಕೈಗಾರಿಕೆಗಳ ಜಿಲ್ಲಾವಾರು ವಿವರಗಳನ್ನು ಕೊಡುವುದು)

ಇ. ಇವುಗಳ ಪುನರುಜ್ಜೀವನಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್ ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ. ದಿನಾಂಕ 31-1-2003 ರಲ್ಲಿದ್ದಂತೆ ರಾಜ್ಯದ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆ: 29,46,20 (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.)

ಆ. ಏಪ್ರಿಲ್ 2001ರಂದು ಭಾರತ ಸರ್ಕಾರದವರು ನಡೆಸಿದೆ ಸಣ್ಣ ಕೈಗಾರಿಕೆಗಳ ಸಮೀಕ್ಷಾವರದಿ ಪ್ರಕಾರ ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ.50ರಷ್ಟು ಮಾತ್ರ ಕಾರ್ಯ ನಿರ್ವಹಿಸುತ್ತಿರುವುದಾಗಿ ವರದಿಯಾಗಿದೆ. ಉಳಿದ ಶೇ.50 ರಷ್ಟು ಘಟಕಗಳು ರೋಗಗ್ರಸ್ತವಾಗಿರುವುದಾಗಿಯೂ, ರೋಗಗಸ್ತ ಹಾದಿಯಲ್ಲಿರುವುದಾಗಿಯೂ ಅಥವಾ ಮುಚ್ಚಿರುವುದಾಗಿಯೂ ವರದಿಯಾಗಿದೆ. ರಾಜ್ಯದ ಸಣ್ಣ ಕೈಗಾರಿಕೆಗಳ ಪೂರ್ಣ ಸ್ಥಿತಿಗತಿಗಳನ್ನು ತಿಳಿಯಲು ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯವನ್ನು ಸರ್ಕಾರ ಪ್ರಾರಂಭಿಸಿದ್ದು ಇದು ಪ್ರಗತಿಯಲ್ಲಿದೆ, ಇದು ಪೂರ್ಣಗೊಂಡ ನಂತರ ಈ ಬಗ್ಗೆ ನಿಖರವಾದ ಅಂಕಿಅಂಶಗಳು ಲಭ್ಯವಾಗುತ್ತದೆ.

ಇ. ಮುಚ್ಚಿಸುವ ಕೈಗಾರಿಕೆಗಳನ್ನು ಪುನರುಸುಜ್ಜೀವನಗೊಳಿಸಲು ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿರುವುದಿಲ್ಲ. ಆದರೆ ರೋಗಗ್ರಸ್ಥ ಕೈಗಾರಿಕೆಗಳ ಪುನಃ ಶ್ಚೇತನಕ್ಕಾಗಿ

ಪ್ರತ್ಯೇಕ ನೀತಿಯನ್ನು ಪ್ರಕಟಿಸಲಾಗಿದೆ, ಅದರಂತೆ ಪುನಃ ಶ್ಚೇತನಗೊಂಡ ರೋಗಗ್ರಸ್ಥ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿ ಮತ್ತು ಸವಲತ್ತುಗಳನ್ನು ನೀಡಲಾಗುತ್ತಿದೆ;

1. ಘಟಕದ ಪುನಃ ಶ್ಚೇತನ ಯೋಜನಾ ವೆಚ್ಚದ ಶೇ.25 ರಷ್ಟು ಹಣವನ್ನು ರೂ.2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ;

2. ಕೆ.ಪಿ.ಟಿ.ಸಿ.ಎಲ್ ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವದಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು;

3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ. ಶೇ.6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ;

4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ;

5. ಕೆಐಎಡಿಬಿ/ಕೆಎಸ್ಎಸ್ಐಡಿಸಿ/ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ;

6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.

7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ.6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ.

8. ಘಟಕವು ಪುನಃಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ. ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಲು ಬೇಕಾಗುತ್ತದೆ.

Annexure

Registration of Small Scale Industries in Karnataka as on 31-1-2003

Sl. No.	DISTRICT	No. of units
1	Bangalore	53453
2	Belgaum	26976
3	Bellary	11276
4	Bijapur	5418
5	Bidar	6740
6	Chickmagalur	5110
7	Chitradurga	6800
8	Kodagu	2994
9	Dharwad	11475
10	Gulbarga	10806
11	Hassam	8092

1	2	3
12	U.K	6406
13	D.K	13910
14	Kolar	11093
15	Mandya	6943
16	Mysore	18028
17	Raichur	7044
18	Shimoga	11043
19	Tumkur	17516
20	Bangalore (R)	13547
21	Bagalkot	5317
22	Chamarjanagar	6716
23	Davanagere	5998
24	Gadag	5908
25	Haveri	6823
26	Koppal	3402
27	Udupi	5786
	Total	**294620**

ಬೈಲಹೊಂಗಲ ತಾಲ್ಲೂಕಿನಲ್ಲಿ ಮೀನುಗಾರರಿಗೆ ಮನೆಗಳು

390(364) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗನೂರು ಹಾಗೂ ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಮಾಟೊಳ್ಳಿ ಗ್ರಾಮದ ಮೀನುಗಾರರಿಗೆ ಮನೆ ಕಟ್ಟಿಕೊಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಆ. ಇನ್ನು ಎಷ್ಟು ದಿನಗಳೊಳಗಾಗಿ ಮನೆಗಳನ್ನು ಕಟ್ಟಿಕೊಡಲಾಗುವುದು?

ಶ್ರೀ ವಸಂತ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ಸಚಿವರು)

ಅ. ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಗ್ರಾಮದಲ್ಲಿ 1995-96ನೇ ಸಾಲಿನಲ್ಲಿ 64 ಮನೆಗಳನ್ನು ನಿರ್ಮಾಣ ಮಾಡಿ ಮೀನುಗಾರರಿಗೆ ಹಂಚಲಾಗಿದೆ. ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದ ಮೀನುಗಾರರಿಂದ ಮನೆ ಬೇಡಿಕೆ ಅರ್ಜಿಗಳು ಬಂದಿರುವುದಿಲ್ಲ. ಮೊಟೊಳ್ಳಿ ಗ್ರಾಮದಲ್ಲಿ 1995.96ನೇ ಸಾಲಿನಲ್ಲಿ 37 ಮನೆಗಳನ್ನು ನಿರ್ಮಾಣ ಮಾಡಿ ಫಲಾನುಭಾವಿಗಳಿಗೆ ವಿತರಿಸಲಾಗಿದೆ.

ಆ. ಉದ್ಭವಿಸುವುದಿಲ್ಲ.

ಸಕ್ಕರೆ ಕಾರ್ಖಾನೆಗಳ ಪುನರುಜ್ಜೀವನ ಕುರಿತು

391(365) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?